ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 8ನೇ ಆಗಸ್ಟ್ 1896.

ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಇದರಿಂದ ಕೆಂಡ ಫಾರೆಸ್ಟ್ಸ್‌ಗಳಿಂದ ಆವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಡಿಪೋಗಳಿಗಾಗಲಿ ಯಾ ತೆಪ್ಪದ ಕಾಡುಗಳಿಗಾಗಲಿ 1897ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಮೂರು ತಿಂಗಳಿಗೆ ವಂದಾವರ್ತಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಷ್ಕರ್ಷಿಸಲ್ಪಡಬಹುದಾದ ಮಾಹೆವಾರ್ ಹಸಿ ಪೋಖ್ತಾ ಮತ್ತು ಪಣ ನಾಟಾ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಡಿಪೋ ಹೆಸರು.	ಸರಬರಾಯಿ ಮಾಡಬೇಕಾದ ಮೊತ್ತ.		
			ತೊಲೆ ಜಂತೆ.	ಮುಂಡಿಗೆಸರಾ.	ಬೊಂಬು.
			ಸಲೆ ಅಡಿ.	ಗಾಡಿಗಳು.	ಗಾಡಿಗಳು.
ಗುಂಡ್ಲು ..	ಭಂಡೀಪುರ ..	ಮೈಸೂರು ವುಡ್ಯಾರ್ಡ್			
	ಬೇರಂಬಾಡಿ ..	ಡಿಪೋ	ವಣವುರ	..	..
ಹೆಗ್ಗಡದೇವನಕೋಟೆ.	ಪೇಗೂರು ..	ಡಿಪೋ	22,000	100	..
	ಐನೂರು ವೂರಿಗುಡಿ ..	ಡಿಪೋ	24,000		
	ಕಾಕನಕೋಟೆ ..	ಡಿಪೋ	10,000	95	50
	ಮೇಟಿಕುಪ್ಪೆ ..	ಡಿಪೋ	3,000	..	..
ಹುಣಸೂರು ..	ವೀರನಹೊಸಹಳ್ಳಿ ..	ಡಿಪೋ	ವಣ ಮತ್ತು ಹಸೀ ಪೋಖ್ತಾ		
	ಆನೇಚೌಕೂರು ..	ಡಿಪೋ			
	ದೊಡ್ಡಹರವೆ ..	ಡಿಪೋ	1,000		..
	ಕಬಿನಹಳ್ಳಿ ..	ಡಿಪೋ			
	ವೂವಕಲ್ಲು ..	ಡಿಪೋ			
ಚಾಮರಾಜನಗರ ..	ಚಾಮರಾಜನಗರ ..	ಡಿಪೋ			
ಗುಂಡ್ಲು ..	ಭಂಡೀಪುರ				
ಡಿಪೋ ..	ಡಿಪೋ ..	ಗುಂಡ್ಲು ಡಿಪೋ ..	750	75	25
	ಬೇರಂಬಾಡಿ ..	ಡಿಪೋ ..	750	125	25
ಹೆಗ್ಗಡದೇವನಕೋಟೆ	ಪೇಗೂರು ..	ಪೇಗೂರು ..	1,000	300	..
	ಐನೂರು ವೂರಿಗುಡಿ ..	ಸರಗೂರು ..	1,000	150	50
	ಕಾಕನಕೋಟೆ ...	ವಂಜಗೌಡನಹಳ್ಳಿ ವೈಸೂರು ವುಡ್ಯಾರ್ಡಿಗೆ ಸದರೀ ಜಂಗಲಿನಿಂದ ಅಪೇಕ್ಷಿಸಲ್ಪಡುವ ವಿಸಿಪ್ಟ್ ವೊತ್ತವನ್ನಾಗಲಿ ಅಥವಾ ಕೆಲವು ಭಾಗವನ್ನಾಗಲಿ ಈ ಸ್ಥಳಕ್ಕೆ ಸಾಗಿಸಲ್ಪಡಬೇಕಾಗುತ್ತೆ.			
	ಮೇಟಿಕುಪ್ಪೆ ..	ವುಂಜಗವೂಡನಹಳ್ಳಿ ..	ಡಿಪೋ	ಡಿಪೋ	ಡಿಪೋ
	ಕಾಕನಕೋಟೆ	ಅಂತರ ಸಂತೆ ..	1,000	150	25
	ಮೇಟಿಕುಪ್ಪೆ ..	ಡಿಪೋ ..	1,000	100	25
	ಕಾಕನಕೋಟೆ ..	ವೂಸ್ತಗುಡಿ ಅಥವಾ ಕಾಕನಕೋಟೆ ವೈಸೂರು ವುಡ್ಯಾರ್ಡಿಗೆ ಸದರೀ ಜಂಗಲಿನಿಂದ ಅಪೇಕ್ಷಿಸಲ್ಪಡುವ ವಿಸಿಪ್ಟ್ ವೊತ್ತವನ್ನಾಗಲಿ ಅಥವಾ ಕೆಲವು ಭಾಗವನ್ನಾಗಲಿ ಈ ಸ್ಥಳಕ್ಕೆ ಸಾಗಿಸಲ್ಪಡಬೇಕಾಗುತ್ತೆ.			
ಹುಣಸೂರು ..	ವೀರನಹೊಸಹಳ್ಳಿ ..	ಹುಣಸೂರು ..	1,000	130	50
	ಆನೇಚೌಕೂರು ..				
	ದೊಡ್ಡಹರವೆ ..				
	ಕಬಿನಹಳ್ಳಿ ..	ಡಿಪೋ ..	1,500	175	100
	ವೂವಕಲ್ಲು ..				
ಚಾಮರಾಜನಗರ ..	ಚಾಮರಾಜನಗರ ..	ಚಾಮರಾಜನಗರ ...	2,000	200	100
ಡಿಪೋ ..	ಡಿಪೋ ..	ನಂಜನಗೂಡು ..	1,000	50	50
ಗುಂಡ್ಲು ..	ಬೇರಂಬಾಡಿ ..	ಡಿಪೋ ..	2,000	50	..
ಹೆಗ್ಗಡದೇವನಕೋಟೆ.	ಐನೂರು ವೂರಿಗುಡಿ ..	ಡಿಪೋ ..	2,000	150	..

ಘಾಸಲೆ ವಿವರ.

ತಾಲ್ಲೂಕು.	ಫಾರೆಸ್ಟ್.	ಮಾರ್ಗ.		ಡಿಪೋ ಹೆಸರು.
		ಸುಮಾರು ಜಂಗಲ್ ಮೈಲಿ.	ಸುಮಾರು ಡೈರೋಡ್ ಮೈಲಿ.	
ಗುಂಡ್ಲು ..	ಭಂಡೀಪುರ ..	2ರ ಲಾ॥ 8	48ರ ಲಾ. 52	ಮೈಸೂರು ವುಡ್ಯಾರ್ಡ್
	ಡಿಟೋ ..	1ರ ಲಾ॥ 8	12ರ ಲಾ. 16	ಗುಂಡ್ಲು ಪೇಟೆ ಡಿಪೋ
	ಬೇರಂಬಾಡಿ ..	2ರ ಲಾ॥ 8	48ರ ಲಾ. 58	ಮೈಸೂರು ವುಡ್ಯಾರ್ಡ್
	ಡಿಟೋ ..	1ರ ಲಾ. 8	12ರ ಲಾ. 22	ಗುಂಡ್ಲು ಪೇಟೆ ಡಿಪೋ
ಹೆಗ್ಗಡದೇವನಕೋಟೆ.	ಬೇಗೂರು ..	10ರ ಲಾ॥ 16	38	ಮೈಸೂರು ವುಡ್ಯಾರ್ಡ್
	ಡಿಟೋ ..	4ರ ಲಾ। 10		ಬೇಗೂರು ಡಿಪೋ
	ಐನೂರು ಮಾರಿಗುಡಿ	28	41	ಮೈಸೂರು ವುಡ್ಯಾರ್ಡ್
	ಡಿಟೋ ..	20ರ ಲಾ॥ 28		ಸರಗೂರು ಡಿಪೋ
	ಕಾಕನಕೋಟೆ ..	1ರ ಲಾ॥ 16	35ರ ಲಾ. 56	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	5—20	ಮಂಚಗವುಡನಹಳ್ಳಿ
	ಡಿಟೋ ..	ಡಿಟೋ	7—22	ಅಂತರಸಂತೇ ಡಿಪೋ
	ಡಿಟೋ ..	1ರ ಲಾ. 10	1—10	ಮಾಸ್ತಿಗುಡಿ ಅಥವಾ ಕಾಕನಕೋಟೆ
	ಮೇಟಿಕುಪ್ಪೆ ..	10ರ ಲಾ. 16	36	ಮೈಸೂರು ವುಡ್ಯಾರ್ಡ್
	ಡಿಟೋ ..	5	$2\frac{1}{2}$	ಮಂಚಗವುಡನಹಳ್ಳಿ
	ಡಿಟೋ ..	ಡಿಟೋ	1	ಅಂತರಸಂತೇ ಡಿಪೋ
ಹುಣಸೂರು ..	ವೀರನಹೊಸಹಳ್ಳಿ ..	$12\frac{1}{2}$	$33\frac{1}{2}$	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	$5\frac{1}{2}$	ಹುಣಸೂರು ಡಿಪೋ
	ಅನೇಚಾಕೂರು ..	3	$44\frac{1}{2}$	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	16	ಹುಣಸೂರು ಡಿಪೋ
	ದೊಡ್ಡಹರವೆ ..	7	47	ಮೈಸೂರು ವುಡ್ಯಾರ್ಡ್
	ಡಿಟೋ ..	10	19	ಹುಣಸೂರ್ ಡಿಪೊ ಹನಗೋಡಿಮಾರ್ಗವಾಗಿ
	ಕಬಿನಹಳ್ಳಿ ..	7	37	ಮೈಸೂರು ವುಡ್ಯಾರ್ಡ್
	ಡಿಟೋ ..	7	9	ಹುಣಸೂರು ಡಿಪೋ
	ಮಾವಕಲ್ ..	5	44	ಮೈಸೂರು ವುಡ್ಯಾರ್ಡ್
	ಡಿಟೋ ..	ಡಿಟೋ	16	ಹುಣಸೂರು ಡಿಪೋ
ಚಾಮರಾಜನಗರ ..	ಚಾಮರಾಜನಗರ ..	4ರ ಲಾ. 16	36ರ ಲಾ. 56	ಮೈಸೂರು ವುಡ್ಯಾರ್ಡ್
	ಡಿಟೋ ..	1ರ ಲಾ. 16	20	ಚಾಮರಾಜನಗರ ಡಿಪೋ

2. ತಮಾಂ ದರಖಾಸ್ತುಗಳೂ "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವಗೈರೆಗಳನ್ನು ಫಾರೆಸ್ಟ್ಗಳಿಂದ ಡಿಪೋಗಳಿಗೆ ಸಾಗಿಸುವದಕ್ಕೆ ಮಾತ್ರವೇ ದರಖಾಸ್ತು" ಯಂಬಡಾಗಿ ಮೇಲಿವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು, ದರಖಾಸು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಫಾರೆಸ್ಟಿಗೂ 100 ರೂಪಾಯಿಗಳ ಬೆಲೆಯುಳ್ಳ ಕರೆನ್ಸೀ ನೋಟುಗಳಲ್ಲಿ ಯಾ ಪ್ರೋನೋಟುಗಳಲ್ಲಿ ರವಾನಿಸಬೇಕು. ದರಖಾಸ್ತುಗಳ ಅಜಮಾಯಿಷಿಯುಂದ ಮೇಲ್ಕಂಡ ಕರೆನ್ಸೀ ನೋಟುಗಳನ್ನ ವಾಪಸ್ ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರರವರಿಂದ 1896ನೇ ಇಸವಿ ಆಗಸ್ಟ್ 31ನೇ ತಾರೀಖಿನ ವರಿಗೆ ಅಂಗೀಕರಿಸಲ್ಪಡುವವು.

4. ದರಖಾಸ್ತು ಮಾಡಲು ಯಿಚ್ಛೈಯುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ಬಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ ತಯಾರಾದದ್ದನ್ನ ಸಾಗಿಸುವದಕ್ಕೆ ಮಾತ್ರ ದರಖಾಸ್ತು ಮಾಡಿದ ಪಕ್ಷದಲ್ಲಿ ಅವನು ನಾಟಾ ವಗೈರೆಯನ್ನ ಪ್ರತಿ ಒಂದು ಫಾರೆಸ್ಟಿನಿಂದಲೂ ಡಿಪೋಗಳಿಗೆ ತಯಾರಾದದ್ದನ್ನ ಸಾಗಿಸುವದಕ್ಕೆ ಮಾತ್ರ ಒಪ್ಪಿಕೊಳ್ಳುವ ಕಮ್ಮಿದರವನ್ನು ಜೇರಕ್ಷರೆಯಾಗಿ ನಮೂದಿಸತಕ್ಕದ್ದು. ಭಾರೀನಾಟಾಗಳಿಗೆ ದರ ಸಲೆ ಅಡಿ 1ಕ್ಕೆ ಯಿಷ್ಟು ಚಿಲ್ಲರೇ ಚೌಬೀನೆಗಳಿಗೆ ದರ ಗಾಡೀ 1ಕ್ಕೆ ಯಿಷ್ಟೆಂದು ದರ ನಮೂದಿಸಬೇಕು. ಭಾರೀನಾಟಾಗಳಿಗೆ ದರ ಸಲೆ ಅಡಿ 1ಕ್ಕೆ ಯಿಷ್ಟು ಚಿಲ್ಲರೇ ಚೌಬೀನೆಗಳಿಗೆ ದರ ಗಾಡೀ 1ಕ್ಕೆ ಯಿಷ್ಟೆಂದು ದರ ನಮೂದಿಸಬೇಕು.

ಷರಾ.—ದರ ಗಾಡೀ ಜೋಜಾ ಅಂದರೆ—

ಚಿಲ್ಲರೇ ಚೌಬೀನೆ ಗಾಡಿ 1ಕ್ಕೆ		5 ಸಲೆ ಅಡಿ
ಹೆಬ್ಬಿದರು ..		50 ಆದದು
ಮೇದರ ಗಳು ..		150 ಡಿಟೋ
ಕಿರೀಬಿದರು ..		200 ಡಿಟೋ
ಚಾಮರಾಜನಗರದ ಡಿಪೋದಲ್ಲಿ ಮಾತ್ರ ಕಿರೀಬಿದ್ದರು ಗಾಡಿ 1ಕ್ಕೆ		400

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಮೈಸೂರು ಫಿಡ್ಯಾರ್ಡಿಗೆ ಅಥವಾ ಕಿಲಾನದಿಯ ಥಡಗಳ (ಮೇಲೆ ಗುರ್ತು ಮಾಡಲ್ಪಟ್ಟ) ತೆಪ್ಪದ ಕಡುವಿಗೆ ಜಂಗಲಿನಿಂದ ಸಾಗಿಸಲು ಉದ್ದೇಶಿಸುವ ತಪಾಸು ಚೀಟುಗಳನ್ನೂ ತಯಾರೀ ತಾರೀಖು ಲಾಗಾಯತು 40 ದಿವಸಗಳ ವಳಗಾಗಿ ಮೇಲ್ಕಂಡ ಸ್ಥಳಗಳಿಗೆ ಸಾಗಿಸುವ ಬಗ್ಗೆ ಬದ್ಧವಾಗಿರತಕ್ಕದ್ದು. ಮೈಸೂರು ಫಿಡ್ಯಾರ್ಡಿಗೆ ಅಲ್ಲದೆ ಇತರ ಡಿಪೋಗಳಿಗೆ ರವಾನೇ ಬಗ್ಗೆ ತಯಾರಾಗುವ ಬಿಲ್ಲುಗಳು ಚಾಪೀನೆ ಮತ್ತು ಕೂಂಬುಗಳು ಸಹ ತಯಾರೀ ತಾರೀಖು ಲಾಗಾಯತು 20 ದಿವಸಗಳ ವಳಗೆ ಆಯಾ ಡಿಪೋಗಳಿಗೆ ರವಾನಿಸಲ್ಪಡತಕ್ಕದ್ದು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ಕಾನು ಬರೆದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಇಾಮಿರ್ಡ ತರೀಕ್ ಫಾರೆಸ್ಟ್ ವಂದಕ್ಕೆ 200 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟುತಕ್ಕದ್ದು. ಮೇಲ್ಕಂಡ ಪರತ್ತುಗಳ ಮೇರೆ ನಡೆಯಲು ತಪ್ಪಿದಲ್ಲಿ ಠೇವಣೀ ಹೊಬಲಗನ್ನು ಸರಕಾರಕ್ಕೆ ಜಪ್ತಿಸಿಕೊಳ್ಳಲ್ಪಡುವದು.

7. ಬ್ಯಾಪಿಗೇ ಕಾಲದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾರ್ಯಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಕಮ್ಮಿ ದರದ ಅಥವಾ ಇತರ ಯಾವ ದರಖಾಸ್ತುಗಳನ್ನೂ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

9. ಸಾಮಾನುಗಳು ಸಾಗಿಸುವದಕ್ಕೆ ಗಾಡೀ ರಸ್ತೆ ವಗೈರೇ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ಉದ್ದೇಶಿಸುವ ಕಂಟ್ರಾಕ್ಟುದಾರನೇ ಅತನ ಹಾತ ಲಾಗವಡಿನಿಂದ ತಕ್ಕ ಏರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೇ ಇರುವ ಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ಉದ್ದೇಶಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 24ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ರ 1896—97ನೇ ಸಾಲಿಗೆ ಹಾಸನ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನ ಹಾಸನ ತಾಲ್ಲೂಕು ಕಛೇರಿಯಲ್ಲಿ ಬರುವ ಸೆಪ್ಟಂಬರ್ 7ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡತ್ತೆ.

2. ಅಮಲ್ದಾರು ಅಥವಾ ಶರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟ್ ಜೆಪ್ಯುಟೆ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್ದಾರ್‌ರಿಂದ ಚಡಸವಾಲ್‌ದಾರ್‌ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖೀಲ್ ಚಡಸವಾಲ್ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರು ಹಿಡುವಳಿ ಜಮೀನ್‌ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನ್‌ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರ ವೇನೂ ಯಿರುವದಿಲ್ಲ. ಸದರಂತು ಅಂಥಾ ಜಮೀನ್‌ಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್‌ಗಳನ್ನ ಇಜಾರೆದಾರ್ರು ಅಗಿಯಕೂಡದು. ಬಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲುಗಳು, ಮತ್ತು ಅದು ರವ್ಹಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ತಾಲ್ಲೂಕು ಅಮಲ್ದಾರ್‌ರಿಂದ ಬಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸ ಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್,
ಜೆಪ್ಯುಟೆ ಕಮ್ಮಿಷನರ್.

ನೋಟಿಸ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಆಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುವಂಥಾ ಕೂಪನ್‌ಗಳ